ಇ) ಉದ್ಭವಿಸುವುದಿಲ್ಲ

6(9) ಶ್ರೀ ಬಸವರಾಜು ಹೆಚ್ ಡಿ (ವಿರಾಜಪೇಟೆ) ಮಾನ್ಯ ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯ ಸರ್ಕಾರ ಒಂದಂಕಿ ಅಥವಾ ಎರಡಂಕಿ ಲಾಟರಿಗಳನ್ನು ನಡೆಸುವ ಯೋಜನೆಯಿಂದ ಬಹಳಷ್ಟು ಬಡ ಕಾರ್ಮಿಕ ಕುಟುಂಬಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ರಾಮಚಂದ್ರಗೌಡ (ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ ಅದ್ದರಿಂದ ಕರ್ನಾಟಕ ರಾಜ್ಯದಲ್ಲಿ ಒಂದಂಕಿ ಲಾಟರಿಗಳನ್ನು ನಿಷೇಧಿಸಲಾಗಿದೆ

ಆ) ಕೇಂದ್ರ ಸರ್ಕಾರದ ಲಾಟರಿ (ರೆಗ್ಯುಲೇಷನ್) ಆಕ್ಟ್ 1998ರಂತೆ ಹಾಗೂ ಕರ್ನಾಟಕ ರಾಜ್ಯ ಲಾಟರಿ ನಿಯಮಾವಳಿಗಳು 1999ರನ್ವಯ ರಾಜ್ಯ ಸರ್ಕಾರವು ಒಂದಂಕಿ ಲಾಟರಿಗಳನ್ನು ನಡೆಸುತ್ತಿರುವುದಿಲ್ಲ ಆದರೆ ಬಹುಮಾನದ ರಚನೆ ಮತ್ತು ಮಾದರಿಯಂತೆ ಟಿಕೇಟಿನ ಕೊನೆಯ ಎರಡು ಅಂಕಿಗಳ ಸಂಖ್ಯೆಗಳಿಗೆ ಕೊನೆಯ ಬಹುಮಾನಗಳನ್ನು ನೀಡಲಾಗುತ್ತಿದೆ

7(112) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಉತ್ತರ ಕನ್ನಡ ಜಿಲ್ಲೆ ತೀರಾ ಹಿಂದುಳಿದ ತಾಲ್ಲೂಕಿನ ಜೋಯಡಾದಲ್ಲಿ ರೂ 25 00 ಕೋಟಿ ವೆಚ್ಚದಲ್ಲಿ ಕೈಗಾರಿಕಾ ವಿಕಾಸ ಕೇಂದ್ರವನ್ನು 2006–07ನೇ ಸಾಲಿಗೆ ಸ್ಥಾಪಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ,

ಆ) ಹಾಗಿದ್ದಲ್ಲಿ, ಸರ್ಕಾರ ಕೈಗಾರಿಕಾ ವಿಕಾಸ ಕೇಂದ್ರವನ್ನು ಯಾವಾಗಿನಿಂದ ಪ್ರಾರಂಭಿಸಲಾಗುವುದು (ವಿವರ ಒದಗಿಸುವುದು) ,

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಕೈಗಾರಿಕಾ ವಿಕಾಸ ಯೋಜನೆಯಡಿ 2006–07ನೇ ಸಾಲಿಗೆ ಜೋಯ್ಡಾ ತಾಲ್ಲೂಕಿನ ರಾಮನಗರದಲ್ಲಿರುವ ಕೈಗಾರಿಕಾ ವಸಾಹತುವಿನಲ್ಲಿ

ಅಭಿವೃದ್ಧಿ ಕಾರ್ಯಗಳನ್ನು ರೂ 145 00 ಲಕ್ಷಗಳಲ್ಲಿ ಅನುಷ್ಠಾನಗೊಳಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ

ಆ) 2007–08ನೇ ಸಾಲಿನಲ್ಲಿ ಕೈಗಾರಿಕಾ ವಸಾಹತುವಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸಲಾಗುವುದು

9 (51) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ವಿಶೇಷ ತಹಶೀಲ್ದಾರರುಗಳಿಗೆ ಯಾವ 'ಯಾವ ಅಧಿಕಾರಗಳನ್ನು ನೀಡಲಾಗಿದೆ,

ಆ) ಆಹಾರ ಪಡಿತರ ಚೀಟಿ ವಿತರಣೆ, ಪ್ರಕೃತಿ ವಿಕೋಪ ಪರಿಹಾರ ಮೊದಲಾದ ವಿಷಯಗಳನ್ನು ವ್ಯವಹರಿಸುವ ಅಧಿಕಾರವನ್ನು ಇವರಿಗೆ ನೀಡುವ ಉದ್ದೇಶವೇನಾದರೂ ಸರ್ಕಾರದ ಗಮನದಲ್ಲಿದೆಯೇ ,

ಇ) ಆಗಿದ್ದಲ್ಲಿ, ಯಾವಾಗ ಅದನ್ನು ಜಾರಿಗೊಳಿಸುವುದು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ವಿಶೇಷ ತಹಶೀಲ್ದಾರರುಗಳಿಗೆ ಈ ಕೆಳಕಂಡಂತೆ ಅಧಿಕಾರಿಗಳನ್ನು ನೀಡಲಾಗಿದೆ

1) ರೆಕಾರ್ಡ್ಸ್ ಆಫ್ ರೈಟ್ಸ್, ಜೆ ಸ್ಲಿಪ್ಸ್, ಪೋಡಿ ಪ್ರಕರಣಗಳು, ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಸೆಕ್ಷನ್ 127, 128, 129 ವಿಷಯಗಳನ್ನು ನಿರ್ವಹಿಸುವುದು

2) ಓ ಎ ಪಿ , ಪಿ ಹೆಚ್ ಪಿ , ಟಿ ಡಬ್ಲ್ಯೂಪಿ ಸ್ವಾತಂತ್ರ ಹೋರಾಟಗಾರರ ಪಿಂಚಣಿ ಮಂಜೂರು ಮಾಡುವುದು

3) ನೀರಾವರಿ, ಅರಣ್ಯ, ಪಿ ಡಬ್ಲ್ಯೂಡಿ, ಆಹಾರ ವಿಷಯಗಳು

4) ಸಾಲ ತೀರುವಳಿ ಪತ್ರ, ಮುದ್ರಾಂಕ ಮರುಪಾವತಿ, ವಿ ಪಿ ಸಿ ವಿಷಯಗಳು

5) ಉತ್ತರ ಜೀವಿತ ಪ್ರಮಾಣ ಪತ್ರ

6) ಇತರೇ ಸರ್ಕಾರಿ ಬಾಕಿ ವಸೂಲಾತಿ ಮಾಡುವುದು

7) ಭೂ ಸ್ವಾಧೀನ ವಿಷಯಗಳು ಆರ್ ಹೆಚ್ ಎಸ್ ಗಳನ್ನು ಒಳಗೊಂಡಂತೆ

8) ಇತರೆ ಹಿಂದುಳಿದ ವರ್ಗಗಳ ಜಾತಿ ಪ್ರಮಾಣ ಪತ್ರ ವಿತರಣೆ ಮಾಡುವುದು